# ಮಹಾಭಾರತದ ವಿದುರನೀತಿಯಲ್ಲಿ ಸಾಮಾಜಿಕ ಸಂದೇಶಗಳು

HEMARAJA. N.S , Research Assistant, Karnataka Samskrit University, Pampamahakavi Road, Chamarajapete, Bangalore-18, E-Mail monihemu85@gmail.com mob-8310719147

ಮಹಾಭಾರತ ಗ್ರಂಥವೂ ವ್ಯಾಸ ಮುನಿಗಳಿಂದ ರಚಿಸಲ್ಪಟ್ಟದ್ದಾಗಿದೆ. ಮಹಾಭಾರತವನ್ನು ಪಂಚಮವೇದವೆಂದು ಕೂಡ ಕರೆಯಲಾಗುತ್ತದೆ. ಮಹಾಭಾರತದಲ್ಲಿ ಸಂಪೂರ್ಣ ಒಂದು ಲಕ್ಷಕ್ಕೂ ಹೆಚ್ಚು ಶ್ಲೋಕಗಳು ಇರುವಂಥದ್ದಾಗಿದೆ. ಮಹಾಭಾರತದಲ್ಲಿ ಒಟ್ಟು ಹದಿನೆಂಟು ಪರ್ವಗಳು ಇವೆ. ಮಹಾಭಾರತ ಗ್ರಂಥವೂ ಭಾರತದ ಧಾರ್ಮಿಕ, ತಾತ್ವಿಕ ಹಾಗೂ ಪೌರಾಣಿಕ ಮಹಾಕಾವ್ಯಗಳಲ್ಲಿ ಒಂದೆನಿಸಿಕೊಂಡಿದೆ. ಈ ಗ್ರಂಥವೂ ಹಿಂದೂ ಧರ್ಮದ ಮುಖ್ಯ ಧರ್ಮಗ್ರಂಥವೂ ಕೂಡ ಆಗಿದೆ. ವಿಶ್ವ ಸಾಹಿತ್ಯದ ಸಾಧನೆಗಳಲ್ಲಿ ಒಂದೆಂದು ಪರಿಗಣಿಸಲಾಗಿರುವ ಮಹಾಭಾರತಗ್ರಂಥವು ಭಾರತೀಯ ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿದೆ.

ಮಹಾಭಾರತದಲ್ಲಿ ನಡೆದಂತಹ ಒಂದೊಂದು ಘಟನೆಯೂ ನಮ್ಮ ಇವತ್ತಿನ ಆಧುನಿಕ ಕಲಿಯುಗದಲ್ಲಿ ಆಗುತ್ತಿದೆ ಎಂದರೆ ಮಹಾಭಾರತದ ಶಕ್ತಿ ಮತ್ತು ಮಹತ್ವವನ್ನು ನಾವು ತಿಳಿದುಕೊಳ್ಳಬೇಕು. ಭಗವದ್ಗೀತೆಯಲ್ಲಿ ಹೇಳಿದ ಸಂದೇಶಗಳು ಅದ್ಭುತ ಮತ್ತು ಅಮೋಘವಾಗಿವೆ. ಇವತ್ತಿನ ಪ್ರಚಲಿತ ವಿದ್ಯಮಾನದಲ್ಲಿ ಭಗವಂತನಾದ ಶ್ರೀ ಕೃಷ್ಣ ಪರಮಾತ್ಮನು ಹೇಳಿದ ಮಾತುಗಳು ಒಂದೊಂದು ಕೂಡ ಅಕ್ಷರಸಹ ಸತ್ಯವೆಂಬಂತೆ ಇವತ್ತಿನ ಆಧುನಿಕ ಯುಗದಲ್ಲಿಯೂ ಕೂಡ ನಡೆಯುತ್ತಿದೆ.

ಮಹಾಭಾರತದಿಂದ ನಮಗೆ ಸಾಕಷ್ಟು ಜೀವನ ಸಂದೇಶಗಳು ಉಪಲಭ್ಯವಾಗುವಂಥಹವುಗಳಾಗಿವೆ. ಉದಾ:- ಸರಿಯಾದ ಸಂಗತಿಗಳ ಪರ, ಸತ್ಯದ ಪರ, ನ್ಯಾಯದ ಪರ ನಿಂತರೆ ಮನುಷ್ಯ ಸುಖವಾಗಿರುತ್ತಾನೆ ಹಾಗೂ ಸ್ಥಿರವಾಗಿರುತ್ತಾನೆ ಇಲ್ಲವಾದರೆ ಸರ್ವ ನಾಶವಾಗುತ್ತಾನೆ ಎನ್ನುವಂಥದ್ದು ತಿಳಿಯುತ್ತದೆ. ಅಪೂರ್ಣ ಜ್ಞಾನ ವೆಂಬುದು ಯಾವತ್ತಿದ್ದರೂ ಮಾರಕ ಎನ್ನುವಂಥದ್ದನ್ನು ಅಭಿಮನ್ಯುವಿನಿಂದ ಅರ್ಥವಾಗುತ್ತದೆ. ದುರಹಂಕಾರ ಹಾಗೂ ದುಷ್ಟತನ ಮನುಷ್ಯನನ್ನು ಸರ್ವನಾಶ ಮಾಡುತ್ತದೆ ಎಂಬುದಕ್ಕೆ ದುರ್ಯೋಧನ ಜೀವಂತ ಉದಾಹರಣೆಯಾಗಿದ್ದಾನೆ. ದುಷ್ಕರ್ಮ ಎಂಬುವಂತದ್ದು ಮನುಷ್ಯನನ್ನು ಕೊಲ್ಲುತ್ತದೆ ಎಂಬುದನ್ನು ದುಶ್ಯಾಸನನ್ನು ನೋಡಿ ಕಲಿಯಬಹುದು. ಎಲ್ಲ ತರಹದ ಜೂಜು ಹಾಗೂ ದುರಾಸೆ ಮನುಷ್ಯನ ದುರಂತಕ್ಕೆ ಕಾರಣವಾಗುತ್ತದೆ ಎಂಬುದನ್ನು ತಿಳಿಯಬಹುದಾಗಿದೆ. ಎಷ್ಟೇ ಕಷ್ಟವಾದರೂ ಗುರಿಯನ್ನು ಮುಟ್ಟುವುದು ಅಸಾಧ್ಯವಲ್ಲ ಎಂಬುದನ್ನು ಅರ್ಜುನನಿಂದ ತಿಳಿಯಬಹುದಾಗಿದೆ. ದ್ರೌಪದಿಯ ಚುಚ್ಚುಮಾತುಗಳು ದುರ್ಯೋಧನನ ಮತ್ಸರಕ್ಕೆ ಮುನ್ನುಡಿ ಬರೆದವು. ಹಾಗಾಗಿ ಮಾತನಾಡುವುದಕ್ಕಿಂತ ಮುಂಚೆ ಮನುಷ್ಯ ಸಾವಿರ ಬಾರಿ ಯೋಚಿಸಿ ಮಾತನಾಡಬೇಕು ಇಲ್ಲವಾದರೆ ದ್ರೌಪದಿಯ ಸ್ಥಿತಿ ಮನುಷ್ಯನಿಗೆ ಬರುತ್ತದೆ ಎಂಬುವುದು ತಿಳಿಯಲ್ಪಡುತ್ತದೆ. ಏಕಾಗ್ರ ಮನಸ್ಕನಾಗಿ ಪಾರದರ್ಶಕವಾಗಿ ಕೆಲಸ ಮಾಡಿದರೆ ವೇಗವಾಗಿ ನಾವು ನಮ್ಮ ಗುರಿಗಳನ್ನು ತಲುಪಬಹುದು ಮತ್ತು ನಮ್ಮ ಜೀವನದಲ್ಲಿ ಭಗವಂತನಾದ ಶ್ರೀ ಕೃಷ್ಣನಂಥಹ ಉತ್ತಮ ಗೆಳೆಯರ ಅವಶ್ಯಕತೆ ಬಹಳ ಇರುವಂಥದ್ದು ಎನ್ನುವುದು ಮಹಾಭಾರತದಿಂದ ಗೊತ್ತಾಗುತ್ತದೆ.

ಹೆಣ್ಣಿನ ಕೋಪ, ತಾಪ, ಶಾಪ, ಒಳ್ಳೆಯದಲ್ಲ. ಹೆಣ್ಣನ್ನು ಗೌರಿಸಬೇಕು. ಗೌರವಿಸದಿದ್ದರೆ ಮನುಷ್ಯನು ಶೀಘ್ರವಾಗಿ ದುಸ್ಥಿತಿಯನ್ನು ತಲುಪುತ್ತಾನೆ ಎಂಬುದಕ್ಕೆ ದ್ರೌಪದಿಯ ಕೋಪವೇ ಸಾಕ್ಷಿಯಾಗಿದೆ. ಶಕುನಿಯಂತಹವರನ್ನು ದೂರವಿಡದಿದ್ದರೆ ಮನುಷ್ಯನು ತನ್ನ ಅವನತಿಯನ್ನು ತಾನೆ ತಂದುಕೊಳ್ಳುತ್ತಾನೆ ಎಂಬುದನ್ನು ದುರ್ಯೋಧನನನ್ನು ನೋಡಿದರೆ ತಿಳಿಯುತ್ತದೆ. ಸೇಡಿಗಾಗಿ ಹೊರಟವನು ಕೊನೆಗೆ ಅಂತ್ಯವನ್ನು ಹೊಂದುತ್ತಾನೆ ಎಂಬುದು ದುರ್ಯೋಧನನಿಂದ ತಿಳಿಯುತ್ತದೆ. ಪ್ರೀತಿ ಹಾಗೂ ವ್ಯಾಮೋಹದಲ್ಲಿ ಕುರುಡರಾದರೆ ಮನುಷ್ಯನನ್ನು ಕಾಪಾಡಲೂ ಯಾರಿಂದಲೂ ಸಾಧ್ಯವಿಲ್ಲ ಎಂಬುದು ಧೃತರಾಷ್ಟ್ರನಿಂದ ತಿಳಿಯುತ್ತದೆ. ಯಾವ ಮನುಷ್ಯ ಮಹತ್ವಾಕಾಂಕ್ಷೆಯುಳ್ಳವನಾಗಿದ್ದರೆ ಅವನನ್ನು ತಡೆಯುವ ಸಾಮರ್ಥ್ಯ ಹಾಗೂ ಅವನನ್ನು ಸೋಲಿಸುವ ಸಾಮರ್ಥ್ಯ ಯಾರಿಗೂ ಇರುವುದಿಲ್ಲ ಎಂಬುವಂಥದ್ದು ಮಹಾಭಾರತದಿಂದ ಗೊತ್ತಾಗುತ್ತದೆ. ಈ ರೀತಿಯಾಗಿ ಮಹಾಭಾರತದಿಂದ ಸಾವಿರಾರು ಜೀವನ ಸಂದೇಶಗಳು ಉಪಲಭ್ಯವಾಗುತ್ತವೆ.

ಮಹಾಭಾರತದಲ್ಲಿ ಪ್ರೇಮ, ದ್ವೇಶ ಸ್ನೇಹ, ಕಾಳಜಿ, ಮರುಕ, ಮಮತೆ, ಕ್ರೌರ್ಯ, ದ್ವಂದ್ವ ಮೊದಲಾದ ಎಲ್ಲಾ ಭಾವನೆಗಳಿಗೆ ಪೂರಕವಾದ ಕಥೆಗಳನ್ನು ಸಂದೇಶಗಳನ್ನು ಕಾಣಬಹುದು. ಮಹಾಭಾರತದಲ್ಲಿ ಭಗವದ್ಗೀತೆ ಮುಂತಾದ ಉಪದೇಶವನ್ನು ಕಾಣಬಹುದಾಗಿದೆ. ಹಾಗೆಯೇ ಮಹಾಭಾರತದಲ್ಲಿ ಪ್ರಮುಖವಾಗಿ ವಿದುರನೀತಿಯನ್ನು ನಾವು ಕಾಣಬಹುದಾಗಿದೆ. ವಿದುರ ಅನೇಕ ವಿಧವಾದ ಸಾಮಾಜಿಕ ಸಂದೇಶಗಳ ಸಾರವನ್ನು ಧೃತರಾಷ್ಟ್ರನಿಗೆ ನೀಡಿದ್ದಾನೆ. ಯಾವಾಗ ಧೃತರಾಷ್ಟ್ರ ವಿದುರನಿಂದ ರಾಜನೀತಿಯ ಉಪದೇಶಗಳನ್ನು ತಿಳಿಯಲು ಬಯಸುತ್ತಾನೋ ಆಗ ಮಂತ್ರಿಯಾದಂತಹ ವಿದುರ ಅನೇಕ ರಾಜ ಧರ್ಮದ ವಿಷಯಗಳನ್ನು ಹಾಗೂ ಸಾಮಾಜಿಕ ಸಂದೇಶಗಳನ್ನೊಳಗೊಂಡಂತಹ ವಿಚಾರಗಳನ್ನು ಧೃತರಾಷ್ಟ್ರನಿಗೆ ಬೋಧನೆಯನ್ನು ಮಾಡುತ್ತಾನೆ. ವಿದುರ ಧೃತರಾಷ್ಟ್ರನಿಗೆ ಬೋಧನೆ ಮಾಡುವಂತಹ ಈ ಭಾಗವು ಮಹಾಭಾರತದಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಉದ್ಯೋಗ ಪರ್ವದ ಮೂವತ್ತು ಮೂರರಿಂದ ನಲವತ್ತರ ವರೆಗಿನ ಎಂಟು ಅಧ್ಯಾಯಗಳಲ್ಲಿ ಈ ಪ್ರಸಂಗವು ಹೇಳಲ್ಪಟ್ಟಿದೆ. ಇದರಲ್ಲಿ ವ್ಯವಹಾರ, ಮಾತು, ನೀತಿ, ಸದಾಚಾರ, ಧರ್ಮ, ಸುಖ–ದುಃಖಗಳು ಪ್ರಾಪ್ತವಾಗುವ ಬಗೆ, ತ್ಯಾಜ್ಯ ಹಾಗೂ ಗ್ರಾಹ್ಯಗುಣಗಳು, ಕರ್ಮದ ನಿರ್ಣಯ, ತ್ಯಾಗದ ಮಹಿಮೆ, ನ್ಯಾಯದ ಸ್ವರೂಪ, ಸತ್ಯ, ಪರೋಪಕಾರ, ಕ್ಷಮೆ, ಅಹಿಂಸೆ, ಮಿತ್ರನ ಲಕ್ಷಣ, ಕೃತಘ್ನನಿಗುಂಟಾಗುವ ದುರ್ದಶೆ, ನಿರ್ಲೋಭ ಮುಂತಾದವುಗಳ ವರ್ಣನೆ ಮಾಡುತ್ತಾ ರಾಜಧರ್ಮದ ಸುಂದರವಾದ ನಿರೂಪಣೆಯನ್ನು ಮಾಡಿದ್ದಾನೆ. ಈ ಭಾಗವೂ. “ವಿದುರ ನೀತಿ” ಎಂಬುದಾಗಿಯೂ ಖ್ಯಾತಿಯನ್ನು ಪಡೆದಿದೆ. ಹೀಗೆ ವಿದುರ ನೀಡಿದ ತನ್ನ ಅನೇಕ ಉಪದೇಶದಲ್ಲಿ ಸಾಮಾಜಿಕ ಸಂದೇಶಗಳನ್ನು ನೀಡಿದ್ದಾನೆ ಆ ಸಾಮಾಜಿಕ ಸಂದೇಶಗಳನ್ನು ಈ ರೀತಿಯಾಗಿ ಕೆಳಗೆ ನೀಡಿರುವ ಅನೇಕ ಶ್ಲೋಕಗಳಲ್ಲಿ ನೋಡಬಹುದಾಗಿದೆ. ಮೊದಲನೆಯದಾಗಿ ಗೋವು, ಸೇವಾ, ಕೃಷಿ, ಭಾರ್ಯಾ, ವಿದ್ಯಾ, ವೃಷಲಸಂಗತಿಃ ಈ ಆರು ಸಂಗತಿಗಳ ಬಗ್ಗೆ ಈ ಪದ್ಯದಲ್ಲಿ ಹೇಳುತ್ತದ್ದಾನೆ.

**ಷಡಿಮಾನಿ ವಿನಶ್ಯಂತಿ ಮುಹೂರ್ತಮನವೇಕ್ಷಣಾತ್ ।**

**ಗಾವಃ ಸೇವಾ ಕೃಷಿರ್ಭಾರ್ಯಾ ವಿದ್ಯಾ ವೃಷಲ ಸಂಗತಿಃ ॥ [1]**

ಈ ಆರು ಸಂಗತಿಗಳು ಇವೆಯಲ್ಲ, ಇವುಗಳನ್ನು ಯಾವಾಗಲೂ ಸೇವೆಯನ್ನು ಮಾಡಬೇಕು. ಆ ಕಡೆಗೆ ಯಾವಾಗಲೂ ನಮ್ಮ ಲಕ್ಷ್ಯ ಇಡಬೇಕು. ಒಂದು ವೇಳೆ ನಮ್ಮ ಲಕ್ಷ್ಯ ಇವುಗಳ ಕಡೆಗೆ ಕಡಿಮೆಯಾದರೆ ನಮಗೆ ಅವುಗಳ ಸಂಬಂಧ ಬಿಟ್ಟು ಹೋಗುತ್ತದೆ ಎಂಬುದಾಗಿ, ಹಾಗೆಯೇ ಗೋವುಗಳ ಜೊತೆ ನಿರಂತರವಾದಂತಹ ಸಂಬಂಧ ಇರಬೇಕು ಅಂದ್ರೆ ಅವುಗಳ ಸೇವೆ ಮಾಡಬೇಕು ಅಥವಾ ಅವುಗಳ ಕಡೆಗೆ ನಮ್ಮ ಗಮನ ಯಾವಾಗಲೂ ಇರಬೇಕು ಎಂಬುದಾಗಿ. ಒಬ್ಬ ಅಧಿಕಾರಿಯ ಮನೆಯಲ್ಲಿ ಅಥವಾ ಸಿರಿವಂತರ ಮನೆಯಲ್ಲಿ ಅಥವಾ ಒಬ್ಬ ರಾಜನ ಮನೆಯಲ್ಲಿ ಸೇವಕನಾಗಿ ಇದ್ದಂತಹ ವ್ಯಕ್ತಿ ತಾನು ಯಾರಿಗೆ ಸೇವೆಯನ್ನು ಮಾಡಬೇಕಿದೆಯೋ ಆ ಸೇವೆಯ ಕಡೆಗೆ ಯಾವಾಗಲೂ ಗಮನವು ಇರಬೇಕು. ಆ ಸೇವೆಯನ್ನು ಎಂದೂ ಬಿಡುವಂತದ್ದಲ್ಲ ನಿರಂತರವಾಗಿ ನಮ್ಮ ಕಾರ್ಯವನ್ನು ದೇವರ ಸೇವೆಯನ್ನಾಗಿ ತಿಳಿದು ಮಾಡುವುದು ಒಂದಾದರೇ  ಮತ್ತೊಂದರ್ಥದಲ್ಲಿ ಯಾರಿಗೆ ಸೇವಕರಾಗಿ ರಾಜ ಅಥವಾ ಅಧಿಕಾರಿ ಮೊದಲಾದವರಿಗೆ ಕೆಲಸವನ್ನು ಮಾಡುತ್ತಾ ಇರುತ್ತೇವೆಯೋ ಆ ಸೇವೆಯನ್ನು ಯಾವಾಗಲೂ ಮಾಡಬೇಕು. ಹಾಗೆಯೇ ಕೃಷಿಯ ಕಡೆಗೆ ಗಮನವನ್ನು ಯಾವಾಗಲೂ ಕೊಡಬೇಕು. ಕೃಷಿಕರೂ ಎಂದೋ ಒಂದು ದಿವಸ ನಾನು ಗದ್ದೆಗೆ ಹೋಗಿ ಬರುತ್ತೇನೆ ಮತ್ತು ಒಂದು ವಾರ ವಿಶ್ರಾಂತಿ ತೆಗೆದುಕೊಂಡು ಮತ್ಯಾವುದೋ ಒಂದು ದಿವಸ ನಾನು ಗದ್ದೆಗೆ ಬರುತ್ತೇನೆ ಅಂದರೆ, ಆ ಕೃಷಿಕರ್ಮ ಫಲವನ್ನು ಕೊಡುವುದಿಲ್ಲ. ನಿರಂತರವಾಗಿ ಆ ಗದ್ದೆಯ ಹೊಲದಲ್ಲಿ  ಕಾರ್ಯಗಳನ್ನು ಮಾಡುತ್ತಾ ಇರಬೇಕು. ಆಗ ಫಲ ಸಿಕ್ಕೀತು?. ಮತ್ತು ಹೆಂಡತಿಯನ್ನು ಯಾವಾಗಲೂ ಗಮನವಿಟ್ಟು ನೋಡಿಕೊಳ್ಳಬೇಕಾಗಿದೆ. ಅಂದರೆ ಆ ಹೆಂಡತಿಯ ಕಡೆಗೆ ಯವಾಗಲೂ ಗಮನವನ್ನು ಕೊಡಬೇಕು. ಹಾಗೆಯೇ ಗೌರವವನ್ನು ಕೊಡಬೇಕು ಮತ್ತು ಆದರದಿಂದ ಕಾಣಬೇಕು ಎಂಬುದಾಗಿ ಹೇಳಿದೆ. ಅದರಂತೆ ವಿದ್ಯೆಯೂ ಕೂಡ ಆಗಿದೆ. ಶ್ರಮದಿಂದ ಹಗಲು ರಾತ್ರಿ ಅಧ್ಯಯನವನ್ನು ಮಾಡಿ ವಿದ್ಯೆಯನ್ನು  ಪಡೆದವು ಎಂದು ತಿಳಿಯೋಣ ಆದರೆ ಆ ವಿದ್ಯೆಯನ್ನೇನಾದರೂ ಅಭ್ಯಾಸ ಮಾಡುವುದನ್ನು ಬಿಟ್ಟರೇ ಆ ವಿದ್ಯೆ ನಮ್ಮನ್ನು ತ್ಯಜಿಸುತ್ತದೆ. ಹಾಗೆಯೇ ವಿದ್ಯೆಯನ್ನು ನಿರಂತರ ಅಭ್ಯಾಸ ಮಾಡದೇ ಹೋದರೆ ಮರೆತು ಹೋಗುತ್ತದೆ ಎನ್ನುವಂತದ್ದು. ಅಂದರೆ ನಿರಂತರವಾಗಿ ಅಭ್ಯಾಸ ಮಾಡುವುದನ್ನು ಬಿಟ್ಟೇವು ಎಂದಾದರೆ ಆ ವಿದ್ಯೆ ಮರೆತು ಹೋಗುತ್ತದೆ ಎಂದರ್ಥ. ಇದು ಎಲ್ಲಾ ವಿದ್ಯೆಗೂ ಸಂಬಂಧಪಟ್ಟಂತಹ ವಿಷಯವಾಗಿರುವಂತದ್ದು. ಅದರಂತೆಯೇ ಹಿಂದೆ ಹೇಳಿದ ಸೇವಾವೃತ್ತಿಯಲ್ಲಿ ಜೀವನ ಮಾಡುವಂತಹ ವ್ಯಕ್ತಿಗಳು ಒಂದು ರೀತಿಯಾದರೆ ಮತ್ತೊಂದು ರೀತಿಯಲ್ಲಿ ನಮ್ಮನ್ನು ಆಶ್ರಯಿಸಿಕೊಂಡು ಬದುಕುವಂತಹ ಜನರು ಯಾರಿದ್ದಾರೋ ಅವರ ಕಡೆಗೂ ಕೂಡ ನಾವು ಯಾವಾಗಲೂ ಗಮನವನ್ನು ಕೊಡಬೇಕು ಎನ್ನವಂತದ್ದು. ಈ ರೀತಿಯಾಗಿ ಗೋ, ಸೇವಾ, ಕೃಷಿ, ಭಾರ್ಯಾ, ವಿದ್ಯಾ, ವೃಷಲಸಂಗತಿಃ ಈ ವಿಷಯಗಳ ಕಡೆಗೆ ನಾವು ಯಾವಾಗಲೂ ಗಮನವನ್ನು ಕೊಡುತ್ತಾ ಇರಬೇಕು ಇಲ್ಲವಾದಲ್ಲಿ ಅವುಗಳು ನಮ್ಮನ್ನ ಬಿಟ್ಟುಹೋಗುತ್ತವೆ ಎನ್ನುವಂತಹದ್ದನ್ನು ಇಲ್ಲಿ ಹೇಳಿದ್ದಾರೆ.

**ಹಾಗೆಯೇ:–**

**ಷಡೇತೇ ಹ್ಯವಮನ್ಯಂತೇ ನಿತ್ಯಂ ಪೂರ್ವೋಪಕಾರಿಣಮ್**

---

[1]. ಮಹಾಭಾರತ, ಉದ್ಯೋಗ ಪರ್ವ, ಅಧ್ಯಾಯ–9,–18

**ಆಚಾರ್ಯಂ ಶಿಕ್ಷಿತಾಶಿಷ್ಯಾಃ ಕೃತಧಾರಾಶ್ಚ ಮಾತರಮ್ ।**

**ನಾರೀಂ ವಿಗತಕಾಮಾಸ್ತು ಕೃತಾರ್ಥಶ್ಚ ಪ್ರಯೋಜಕಂ**

**ನಾವಂ ನಿಸ್ತೀರ್ಣಗಾಂಧಾರಾಃ ಮಾತುರಾಶ್ಚ ಚಿಕಿತ್ಸಕಂ ॥**[2]

ಇಲ್ಲಿ ಹೇಳಿರುವ ಆರು ಜನರು ಕೂಡ ತಮ್ಮ ಕೆಲಸವಾದ ಮೇಲೆ ಯಾರಿಂದ ಪ್ರಯೋಜನವನ್ನು ಪಡೆದಿರುತ್ತಾರೋ ಅವರನ್ನು ಬಿಟ್ಟುಬಿಡುತ್ತಾರೆ ಎಂಬುದಾಗಿದೆ. ಮತ್ತು ಅನಂತರ ಅವರನ್ನು ಮರೆತು ಬಿಡುತ್ತಾರೆ ಎನ್ನುವಂತಹದ್ದಾಗಿದೆ. ಆಚಾರ್ಯರಿಂದ ವಿದ್ಯೆಯನ್ನು ಕಲಿತಂತಹ ಶಿಷ್ಯರು ಆಚಾರ್ಯರನ್ನು ಮರೆತು ಬಿಡುತ್ತಾರೆ. ಇದು ಸತ್ಯವಾದದ್ದು ಕೂಡ ಆಗಿದೆ. ಆದರೆ ಉತ್ತಮ ಹಾಗೂ ಯೋಗ್ಯ, ಸಜ್ಜನರಾದ ವಿದ್ಯಾರ್ಥಿಗಳಾದರೆ ಜೀವನಪೂರ್ಣವಾಗಿ ಗುರುಗಳನ್ನು ಸ್ಮರಣೆ ಮಾಡುತ್ತಾ ಇರುತ್ತಾರೆ. ಗುರುಗಳ ಉಪಕಾರವನ್ನು ಸ್ಮರಣೆಮಾಡಬೇಕು ಯಾಕೆ ಅಂತ ಹೇಳಿದರೆ, ಗುರುಗಳು ವಿದ್ಯೆಯನ್ನು ಕೊಟ್ಟಿರುತ್ತಾರೆ. ಆ ಋಣದ ಬಾರ ನಮ್ಮ ಮೇಲಿರುತ್ತದೆ. ಹಾಗಾಗಿ ನಾವು ದಕ್ಷಿಣಾದಿ ಗಳನ್ನು ಕೊಟ್ಟರೂ ಕೂಡ ಗುರುಗಳು ಕೊಟ್ಟಂತಹ ವಿದ್ಯೆಗೆ ಪ್ರತಿಯಾಗಿ ನಾವು ಯಾವುದನ್ನೋ ಕೊಟ್ಟಂತೆ ಆಗುವುದಿಲ್ಲ ಅಂತಹ ದೊಡ್ಡದಾದಂತಹ ಋಣ ನಮ್ಮ ಮೇಲೆ ಇರುತ್ತದೆ. ಆದರೆ ಕೆಲವು ಉತ್ತಮ ಶಿಷ್ಯರಲ್ಲದವರು ಒಂದು ಸಾರಿ ಗುರುಗಳಿಂದ ವಿದ್ಯೆಯನ್ನು ಪಡೆದ ಮೇಲೆ ಗುರುಗಳನ್ನೆ ಮರೆತು ಬಿಡುತ್ತಾರೆ ಎನ್ನುವಂತಹದ್ದು. ಹಾಗೆಯೇ ಮದುವೆ ಆಗುವವರೆಗೂ ತಾಯಿಯ ಸ್ಮರಣೆ ಮಾಡುತ್ತಾರೆ. ಮದುವೆಯಾದ ಮೇಲೆ ತಾಯಿಯನ್ನು ಮರೆತು ಬಿಡುತ್ತಾರೆ ಎಂಬುದಾಗಿ. ಹಾಗೆಯೇ ಹೆಂಡತಿ ಬಂದ ಮೇಲೆ ತಾಯಿಯೂ ಕೂಡ ಮರೆತು ಹೋಗುತ್ತಾಳೆ ಎಂಬುದಾಗಿ ಇಲ್ಲಿ ಹೇಳುತ್ತಾ ಇದ್ದಾರೆ. ಪ್ರಕೃತದಲ್ಲಿ ಕೆಲವು ದುಷ್ಟ ಮಕ್ಕಳನ್ನು ಕುರಿತು ಹೇಳುತ್ತಿರುವಂತಹ ವಿಚಾರವಾಗಿದೆ. ಯಾರು ಮದುವೆಯ ನಂತರದಲ್ಲಿ ಹೆಂಡತಿ ಬಂದ ಮೇಲೆ ತನ್ನ ತಾಯಿಯನ್ನು ಮರೆಯುತ್ತಾನೋ ಅವನು ಉತ್ತಮ ಮಗನಲ್ಲ ಎಂದರ್ಥ. ಅದರಂತೆಯೇ ಕಾಮರಹಿತನಾದಂತಹ ಪುರುಷನಾದವನು ಕೂಡ ತನ್ನ ಕಾರ್ಯವಾದ ಮೇಲೆ ಸ್ತ್ರೀಯನ್ನು ಮರೆತು ಬಿಡುತ್ತಾನೆ. ಹೀಗೆ ಮನುಷ್ಯರು ಕೆಲಸವು ಮುಗಿದ ಮೇಲೆ ಯಾರಿಂದ ಕೆಲಸವು ಆಗಿರುತ್ತದೋ ಅವರನ್ನು ಮರೆತು ಬಿಡುತ್ತಾರೆ. ಕೆಲಸಕೊಟ್ಟವರನ್ನು ಅಥವಾ ಮಾಡಿ ಕೊಟ್ಟವರನ್ನು ಮರೆತು ಬಿಡುತ್ತಾರೆ. ಹೇಗೆ ನದಿಯನ್ನು ದಾಟಿದ ಮೇಲೆ ನಾವು ದೋಣಿಯನ್ನಾಗಲಿ, ನಾವಿಕನನ್ನಾಗಲಿ, ಮರೆತು ಹೋಗಿ ಬಿಡುತ್ತೇವೆಯೋ. ಹಾಗೆ ರೋಗಿಯಾದವನು ತನ್ನ ರೋಗವನ್ನು ಗುಣಮಾಡಿದಂತಹ ವೈದ್ಯನನ್ನು ಮರೆತು ಬಿಡುತ್ತಾನೆ. ರೋಗ ಇರುವವರೆಗೂ ವೈದ್ಯನ ನೆನಪು ಇರುತ್ತದೆ. ರೋಗ ಹೋದ ಮೇಲೆ ಆ ವೈದ್ಯನನ್ನು ಮರೆತು ಬಿಡುತ್ತಾನೆ. ಹೀಗೆ ಈ ಆರು ಜನರು ತನಗೆ ಹಿಂದೆ ಉಪಕಾರ ಮಾಡಿದ್ದನ್ನು ಮರೆತು ಬಿಡುತ್ತಾರೆ. ಈ ಕ್ರಿಯೆ ಸಮಾಜದಲ್ಲಿ ಸಾಮಾನ್ಯವಾಗಿ ನಡೆಯುವಂತಹ ಕ್ರಿಯೆಯಾಗಿದೆ. ಉತ್ತಮರಾದಂತಹ ಜನರಾದರೆ ಆ ಉಪಕಾರದ ಸ್ಮರಣೆಯನ್ನು ಯಾವಾಗಲೂ ಮಾಡುತ್ತಾ ಇರುತ್ತಾರೆ. ಎಂಬುದಾಗಿ ವಿದುರ ಯುಧಿಷ್ಠಿರನಿಗೆ ಹೇಳುತ್ತಾ ಇದ್ದಾನೆ.

**ಆರೋಗ್ಯಮಾನೃಣ್ಯಮವಿಪ್ರವಾಸಃ ಸದ್ಭಿರ್ಮನುಷ್ಯೈಃ ಸಹ ಸಂಪ್ರಯೋಗಃ ।**

**ಸ್ವಪ್ರತ್ಯಯಾವೃತ್ತಿರಭೀತವಾಸಃ ಷಡ್ ಜೀವಲೋಕಸ್ಯ ಸುಖಾನಿ ರಾಜನ್ ॥**

---

[2] .ಮಹಾಭಾರತ, ಉದ್ಯೋಗಪರ್ವ, ಅಧ್ಯಾಯ–9,–19.

ಹೇ ಧೃತರಾಷ್ಟ್ರ ! ಪ್ರಧಾನವಾಗಿ ಆರೋಗ್ಯವಿರಬೇಕು. ಎಷ್ಟೇ ಹಣ ಇದ್ದರೂ, ಎಷ್ಟೇ ಸಂಪತ್ತು ಇದ್ದರೂ, ಎಷ್ಟೇ ಭವನಗಳಿದ್ರೂ. ಅವು ಯಾವುವೂ ಕೂಡ ಪ್ರಧಾನವಾದಂತಹವುಗಳಾಗಲ್ಲ. ಪ್ರಧಾನವಾಗಿ ಆರೋಗ್ಯ ಚೆನ್ನಾಗಿ ಇರಬೇಕು. ನಿಜವಾದ ಸಂಪತ್ತು ಎಂದರೆ ಅದು ಆರೋಗ್ಯವೇ ಆಗಿದೆ. ಹಾಗೆಯೇ ಸುಖದ ಮತ್ತೊಂದು ಸೂತ್ರವನ್ನು ಹೇಳುತ್ತಾನೆ ವಿದುರ. ಸಾಲ ಇಲ್ಲದೇ ಇರುವಿಕೆ ಅಂದರೆ ಸಾಲ ಇಲ್ಲದ ರೀತಿಯಲ್ಲಿ ಜೀವನವನ್ನು ಮಾಡಬೇಕು ಎಂಬುದಾಗಿ. ಇಲ್ಲಿ ಸಾಲ ಅಂದ್ರೆ ಋಣ ಎಂದರ್ಥ. ಋಣಗಳು ಮೂರು ಬಗೆಯಾಗಿವೆ, ದೇವ ಋಣ, ಪಿತೃ ಋಣ, ಋಷಿ ಋಣ, ಎಂಬುದಾಗಿ. ದೇವತೆಗಳು ಮಳೆ ಬೆಳೆಯನ್ನು ಕೊಟ್ಟು ಉಪಕಾರವನ್ನು ಮಾಡುತ್ತಾರೆ, ಅವರ ಋಣ ನಮ್ಮ ಮೇಲಿದೆ. ತಂದೆ ತಾಯಂದಿರು ಜನ್ಮವನ್ನು ಕೊಟ್ಟಿದ್ದಾರೆ. ಹಾಗಾಗಿ ಪಿತೃಗಳ ಋಣ ನಮ್ಮ ಮೇಲಿದೆ. ವಿದ್ಯೆಯನ್ನು ಕೊಟ್ಟಿದ್ದಾರೆ ಹಾಗೂ ಉದ್ಧಾರವಾಗುವ ಮಾರ್ಗಗಳನ್ನು ಋಷಿ ಮುನಿಗಳು ನಮಗೆ ಕೊಟ್ಟಿದ್ದಾರೆ ಎನ್ನುವುದಕ್ಕೋಸ್ಕರ ಋಷಿಗಳ ಋಣ ಪ್ರತಿಯೊಬ್ಬರ ಮೇಲೆ ಇರುತ್ತದೆ. ಹಾಗಾಗಿ ಈ ರೀತಿಯಾದ ಮೂರು ಪ್ರಕಾರವಾದ ಸಾಲಗಳಿಗೆ ಪ್ರತಿಯಾಗಿ ಏನನ್ನಾದರೂ ಮಾಡಬೇಕು. ಉತ್ತಮವಾದಂತಹ ರೀತಿಯಲ್ಲಿ ಯಜ್ಞಯಾಗಗಳನ್ನು ಹೋಮ ಹವನಗಳನ್ನು ಮಾಡಿ ಕನಿಷ್ಠ ಪಕ್ಷ ವೈಶ್ವದೇವನ ಕ್ರಿಯೆಗಳನ್ನು ಮಾಡಿಯಾದರೂ ದೇವತೆಗಳ ಉಪಕಾರಸ್ಮರಣೆಯನ್ನು ಮಾಡಬೇಕಾಗಿದೆ. ಉತ್ತಮ ಸಂತಾನವನ್ನು ಪಡೆದು ಅವರನ್ನು ಸನ್ಮಾರ್ಗದಲ್ಲಿ ನಡೆಯುವ ಹಾಗೆ ಪ್ರೇರಣೆಯನ್ನು ಮಾಡಿದ್ದೇಯಾದಪಕ್ಷದಲ್ಲಿ ಅದು ಪಿತೃ ಋಣವನ್ನು ಕಳೆದುಕೊಂಡಂತೆ ಆಗುತ್ತದೆ. ವಾಸ್ತವದಲ್ಲಿ ಋಷಿ ಋಣವನ್ನು ಕಳೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುತ್ತದೆ ಶಾಸ್ತ್ರ. ಆದರೂ ಕೂಡ ಋಷಿಗಳ ಉಪಕಾರ ಸ್ಮರಣೆ ಮಾಡುವುದರ ಮೂಲಕವಾದರೂ ನಾವು ಆ ಋಷಿಗಳ ಋಣವನ್ನು ಕಳೆದುಕೊಳ್ಳುವುದಕ್ಕೆ ಪರಿಹಾರ ಮಾಡಿಕೊಳ್ಳುವುದಕ್ಕೆ ಆಗದೇ ಇದ್ದರೂ ಕೂಡ ಆ ಕರ್ತವ್ಯ ನಿರ್ವಹಣೆಯನ್ನು ಮಾಡಲೇ ಬೇಕು ಎಂಬುದಾಗಿ ಹೇಳುತ್ತಾರೆ. ಈ ಮಾತನ್ನು ಮೂರನೆಯದಾಗಿ ವಿದರ ಹೇಳುತ್ತಾನೆ. ದೂರದ ಪ್ರವಾಸವನ್ನು ಮಾಡದೇ ಇರಬೇಕು ಎಂಬುದಾಗಿ. ಅಂದರೆ ದೂರದ ಪ್ರಯಾಣವನ್ನು ಮಾಡದಂತೆ ಒಂದೇ ಕಡೆ ಇರುವುದೇನಿದೇ ಇದು ಸುಖಮಯವಾದ ಜೀವನಕ್ಕೆ ಸಾಧ್ಯ ಎಂಬುದಾಗಿ. ಯಾವಾಗಲೂ ಪ್ರಯಾಣದಲ್ಲಿ ಇರುವಂತಹ ಜನರ ಜೀವನ ಅಷ್ಟೊಂದು ಸುಖಮಯವಾಗಿರುವುದಿಲ್ಲ. ಒಂದೊಂದು ಕಡೆಗೆ ಹೋದಾಗ ಒಂದೊಂದು ರೀತಿಯಲ್ಲಿ ಜಗತ್ತನ್ನು ನೋಡುತ್ತಿರುತ್ತಾರೆ. ಅನುಕೂಲ ಇರುತ್ತೆ ಅಥವಾ ಇಲ್ಲದೇ ಹೋಗುವಂತದ್ದು ಇಂತಹ ಸಂದರ್ಭದಲ್ಲಿ ಸುಖಮಯವಾದ ಜೀವನ ಸಾಧ್ಯವಿಲ್ಲ ಒಂದೇ ಕಡೆ ಇದ್ದಾಗ ಪ್ರಯಾಣವಿಲ್ಲದೇ ಇರುವುದೆಂತಾದರೆ ಆಗ ಒಂದು ವ್ಯವಸ್ಥಿತವಾದಂತಹ ಜೀವನವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ಪ್ರಯಾಣವಿಲ್ಲದ ಬದುಕು ಸುಖಮಯವಾದ ಜೀವನದ ಮತ್ತೊಂದು ಅಂಶ ಎಂಬುದಾಗಿ ಹೇಳುತ್ತಾರೆ. ಹಾಗೆಯೇ ಸಜ್ಜನರ ಜೊತೆಯಲ್ಲಿ ಯಾವಾಗಲೂ ಸಮಾಗಮ ಇರಬೇಕು ಎಂಬುದಾಗಿ. ಅಂದರೆ ಯೋಗ್ಯರಾದಂತಹ ಜನರ ಜೊತೆಯಲ್ಲಿ ಮತ್ತೆ ಮತ್ತೆ ಬೇಟಿಯಾಗುತ್ತಾ ಇರಬೇಕು ಎಂದರ್ಥ. ಹಾಗೆಯೇ ಮತ್ತೆ ಹೇಳುತ್ತಾನೆ ವಿದುರ. ತನ್ನ ಅಧೀನದಲ್ಲಿ ಇರುವಂತಹ ವೃತ್ತಿ ಅಥವಾ ಬದುಕಿನ ಶೈಲಿ, ತನ್ನ ಅಧೀನದಲ್ಲಿರಬೇಕು ತಾನು ಹೇಳಿದಂತೆ ತನ್ನ ಜೀವನ ನಡೆಯಬೇಕು, ಆಗ ಜೀವನ ಸುಖಮಯವಾಗಿರುತ್ತದೆ ಎಂದು. ಹಾಗೆಯೇ ಭಯಪಡದ ರೀತಿಯಲ್ಲಿರಬೇಕು ಎಂಬುದಾಗಿ, ಅಂದರೆ ಮನಸ್ಸಿನ ಸ್ಥಿತಿ ಅಥವಾ ವಾಸಮಾಡುವ ಮನೆಗಳು, ಪರಿಸರ ಇವೆಲ್ಲವೂ ಸುಸ್ಥಿತಿಯಲ್ಲಿ ಇರುವವು ಎಂದಾದರೆ ಅವನು ಸುಖಮಯವಾದ ಜೀವನವನ್ನು ನಡೆಸುವುದಕ್ಕೆ ಸಾಧ್ಯ. ಇವುಗಳಲ್ಲಿ ಯಾವುದಾದರೂ ಒಂದು

ಅಂಶವೂ ಇಲ್ಲವಾದ ಸಂದರ್ಭದಲ್ಲಿ ಸುಖ ಜೀವನವನ್ನು ನಡೆಸುವುದಕ್ಕೆ ಆಗುವುದಿಲ್ಲ ಮತ್ತು ನೆಮ್ಮದಿಯ ಜೀವನವನ್ನು ಸಾಗಿಸುವುದಕ್ಕೆ ಆಗುವುದಿಲ್ಲ ಎಂಬುದಾಗಿ ಹೇಳುತ್ತಾನೆ. ಮುಂದೆ ವಿದುರ ಹೀಗೆ ಹೇಳುತ್ತಾನೆ ಕೆಲವು ಜನರಿದ್ದಾರೆ ಅವರಿಗೆ ಎಂದೂ ಸುಖ ಎನ್ನವಂತಹದ್ದು ಇರುವುದಿಲ್ಲ ನಿತ್ಯ ದುಃಖಿಗಳಾಗಿಯೇ ಇರುತ್ತಾರೆ. ಬೇಕಾದಂತಹ ಸಂಪತ್ತು ಇರಲಿ, ಆರೋಗ್ಯ ಇರಲಿ, ಅಥವಾ ಒಂದೇ ಕಡೆ ಮನೆ ಮಾಡಿಕೊಂಡಿರಲಿ ಎಲ್ಲವೂ ಇದ್ದರೂ ಕೂಡ ದುಃಖಿಯಾಗಿರುತ್ತಾನೆ ಎಂಬುದಾಗಿ ಹೇಳುತ್ತಿದ್ದಾರೆ. ಹಾಗೆಯೇ ಮುಂದೆ ಹೇಳುವ ಅಂಶಗಳು ಯಾವನಲ್ಲಿ ಇರುತ್ತಾವೆಯೋ ಅವನು ಸುಖಿಯಾಗಿರುವುದಕ್ಕೆ ಸಾಧ್ಯವಿಲ್ಲ. ನಿತ್ಯ ದಃಖಿಯಾಗಿರುತ್ತಾನೆ ಎಂಬುದಾಗಿ ಹೇಳುತ್ತಿದ್ದಾನೆ. ಆತ ಯಾರು ಅಂದ್ರೆ ಅಸೂಯೆ ಉಳ್ಳವನು ಎಂಬುದಾಗಿ. ಅಂದರೆ ಮತ್ತೊಬ್ಬರ ಏಳಿಗೆಯನ್ನು ಸಹಿಸದೆ ಇರುವಂತಹ ಜನ ಇದ್ದಾನಲ್ಲ ಅವನು ಎಂದೂ ಸುಖಿಯಾಗಿರುವುದಕ್ಕೆ ಸಾಧ್ಯವಿಲ್ಲ. ಮತ್ತು ಅಸೂಯೆ ಸ್ವಭಾವದವನು. ದಯೆಯನ್ನು ಕಳೆದು ಕೊಂಡವನು, ತೃಪ್ತಿಯೆನ್ನುವುದು ಇಲ್ಲದೇ ಇರುವವನು. ಕ್ರೋಧದ ಸ್ವಭಾವವುಳ್ಳವನು, ನಿತ್ಯವೂ ಸಂದೇಹಪಡುವಂತಹವನು, ಮತ್ತೊಬ್ಬರನ್ನು ಅವಲಂಬಿಸಿ ಜೀವನವನ್ನು ಮಾಡುವವನು, ಈ ಜನರು ಸುಖಿಗಳಾಗಿರುವುದಕ್ಕೆ ಎಂದಿಗೂ ಸಾಧ್ಯವೇ ಇಲ್ಲ. ನಿತ್ಯ ದಃಖಿಯಾಗಿರುತ್ತಾರೆ ಎಂಬುದಾಗಿ ವಿದುರ ಹೇಳುತ್ತಿದ್ದಾನೆ.

**ಹಾಗೆಯೇ:–**

**ಸಮಾಗಮಶ್ಚಸಖಿಭಿಃ ಮಹಾಂಶ್ಚೈವ ಧನಾಗಮಃ ।**

**ತನಯಸ್ಯ ಪರಿಶ್ವಂಗಃ ಸನ್ನಿಪಾತಶ್ಚ ಮೈಥುನೇ ।**

**ಸಮಯೇ ಚ ಪ್ರಿಯಾಲಾಭಃ ಸ್ವ ಯುದ್ಧೇಷು ಸಮುನ್ನತಿಃ**

**ಅಭಿಪ್ರೇತಸ್ಯ ಲಾಭಶ್ಚ ಪೂಜಾ ಚ ಜಲಸಂಸಧಿಃ ॥**[3]

ಇವುಗಳು ಕೂಡ ಸುಖರೂಪಗಳು ಆಗಿರುವವು ಎಂಬುದಾಗಿ ಹೇಳುತ್ತಾ ಇದ್ದಾನೆ ವಿದುರ. ಅವುಗಳು ಯಾವುವು ಎಂದರೆ, ಹಿಂದೆ ಹೇಳಿರುವುದು ಸಜ್ಜನರ ಸಹವಾಸ ಎನ್ನುವುದು ಒಂದಾದರೆ. ಎರಡನೆಯದು, ಸ್ನೇಹಿತರು ಬಹಳ ಮಹತ್ವದ ಸ್ಥಾನವನ್ನು ನಿಭಾಯಿಸುತ್ತಾರೆ ಎಂಬುದಾಗಿ. ಜೀವನದಲ್ಲಿ ಪ್ರತಿಯೊಬ್ಬರೂ ಒಳ್ಳೆಯ ಸ್ನೇಹಿತರನ್ನು ಇಟ್ಟುಕೊಂಡಿರಬೇಕು. ಸ್ನೇಹಿತರಿಲ್ಲದಿರುವುದಕ್ಕೆ ಸಾಧ್ಯವೇ ಇಲ್ಲ ಸ್ನೇಹಿತರಿಲ್ಲದ ಇರುವಿಕೆ ಕೆಲವೊಮ್ಮೆ ಆಪತ್ಕಾಲವನ್ನು ಹೆದುರಿಸುವುದು ಕಷ್ಟವಾಗುತ್ತದೆ. ಆ ದೃಷ್ಟಿಯಲ್ಲಿ ಸ್ನೇಹಿತರು ಬೇಕು ಆದರೆ ಆ ಸ್ನೇಹಿತರು ಯೋಗ್ಯರಾಗಿರಬೇಕು ಎಂಬುದಾಗಿ. ಉತ್ತಮ ಸ್ನೇಹಿತರ ಜೊತೆಯಲ್ಲಿ ಆಗಾಗ ಸಮಾಗಮ ಇರಬೇಕು, ಉತ್ತಮವಾದಂತಹ ಸಂಪತ್ತು ಸುಲಭವಾಗಿ ಬರುತ್ತಾ ಇರಬೇಕು ಅದು ಕೂಡ ಸುಖಕ್ಕೆ ಕಾರಣವಾಗುತ್ತದೆ. ಮತ್ತು ಯೋಗ್ಯ ಸಮಯದಲ್ಲಿ ಯೋಗ್ಯರ ಮಾತುಗಳನ್ನು ಕೇಳುತ್ತಾ ಇರಬೇಕು ಹೀಗೆ ಅನೇಕ ಅಂಶಗಳನ್ನು ವಿದುರ ಸುಖದ ದಾರಿಗಳಾಗಿವೆ ಎನ್ನುವುದಾಗಿ ಹೇಳುತ್ತಾನೆ,

**ಹಾಗೆಯೇ:–**

---

[3]. ಮಹಾಭಾರತ, ಉದ್ಯೋಗಪರ್ವ, ಅಧ್ಯಾಯ–9,–25.

**ನವದ್ವಾರಮಿದಂ ವೇಶ್ಮ ತ್ರಿಸ್ಥೂಣಾಂ ಪಂಚಸಾಕ್ಷಿಕಂ ।**

**ಕ್ಷೇತ್ರಜ್ಞಾವೇಷ್ಟಿತಂ ವಿದ್ವಾನ್ ಯೋ ವೇದ ಸಬರಃ ಕವಿಃ ॥**[4]

(ಇದು ಶುದ್ಧವಾದ ಅಧ್ಯಾತ್ಮದ ವಿದ್ಯೆಯ ವಿಷಯವಾಗಿದೆ) ಒಂದು ಮನೆಯಿದೆ, ಆ ಮನೆಯಲ್ಲಿ ನವದ್ವಾರಗಳಿವೆ. ಮೂರು ಕಂಬಗಳಿವೆ. ಐದು ಸಾಕ್ಷಿಗಳಿವೆ. ಅದರಲ್ಲಿ ಕ್ಷೇತ್ರಜ್ಞನೊಬ್ಬನಿದ್ದಾನೆ. ಯಾರು ಇದನ್ನು ತಿಳಿದಿದ್ದಾನೋ ಅವನು ಶ್ರೇಷ್ಠ ಜ್ಞಾನಿಯಾಗುತ್ತಾನೆ ಎಂಬುದಾಗಿ. ಯಾವುದು ಆ ನವದ್ವಾರದ ಮನೆ ಎಂದರೆ? ಈ ಶರೀರವೇ ನವದ್ವಾರದಿಂದೊಡಗೂಡಿದಂತಹ ಮನೆಯಾಗಿದೆ. ಮೂರು ಕಂಬಗಳೆಂದರೆ ಸತ್ವಗುಣ, ರಜೋಗುಣ, ತಮೋಗುಣ, ಇವುಗಳೇ ಮೂರು ಕಂಬಗಳು ಎಂಬುದಾಗಿ. ಐದು ಸಾಕ್ಷಿಗಳು ಎಂದರೆ ಪಂಚ ಜ್ಞಾನೇಂದ್ರಿಯಗಳು ಅವು ಸಾಕ್ಷಿಗಳಾಗಿವೆ ಎಂದರ್ಥ. ಕ್ಷೇತ್ರಜ್ಞನಾಗಿ ಪರಮಾತ್ಮ ಈ ಶರೀರದಲ್ಲಿ ಇದ್ದಾನೆ. ಈ ಆಧ್ಯಾತ್ಮದ ವಿದ್ಯೆ ಯಾರಿಗೆ ಗೊತ್ತಿದೆಯೋ ಅವನು ವಿದ್ವಾಂಸನಾಗುತ್ತಾನೆ ಮತ್ತು ಕವಿ ಎಂಬುದಾಗಿ ಕರೆಸಿಕೊಳ್ಳುತ್ತಾನೆ ಎಂಬುದಾಗಿ ಹೇಳುತ್ತಾನೆ.

**ಹಾಗೆಯೇ:–**

**ಮಿತಂ ಭುಂಕ್ತೇ ಸಂವಿಭಜ್ಯಾಶ್ರಿತೇಭ್ಯಃ ಮಿತಂ ಸ್ವಪಿತೇಮಿತಂ ಕರ್ಮ ಕೃತ್ವಾ ।**

**ದದಾತಿ ಅಮಿತ್ರೇಷ್ವಪಿ ಯಾಚಿತಸ್ಸನ್ ತಮಾತ್ಮವಂತಂ ಪ್ರಜಃ ತ್ಯನರ್ಥಾಃ ॥**

(ಅನರ್ಥಗಳು ಇಂತಹ ವ್ಯಕ್ತಿಗೆ ಬರುವುದಿಲ್ಲ ಎಂಬುದಾಗಿ ಇಲ್ಲ ಎಲ್ಲರಿಗೂ ಬರುವಂಥಹವುಗಳಾಗಿವೆ ಎಂಬುದನ್ನು ಹೇಳುತ್ತಿದ್ದಾನೆ) ಯಾರು ತನ್ನನ್ನು ಆಶ್ರಯಿಸಿಕೊಂಡಿರುವಂತಹ ಜನರಿಗೆ ವಿಭಾಗವನ್ನು ಮಾಡಿಕೊಟ್ಟು ಅಂದರೆ ಆಹಾರದಲ್ಲಿ ಭಾಗವನ್ನು ಮಾಡಿಕೊಟ್ಟು ತಾನು ಮಿತವಾಗಿ ಊಟವನ್ನು ಮಾಡವವನು ಯಾರು ಇದ್ದಾನೋ ಅವನು ಎಂದರ್ಥ. ಬಳಿಗ್ಗೆಯಿಂದ ಅಮಿತವಾದ ಕೆಲಸವನ್ನು ಮಾಡಬೇಕು ಅಂದರೆ ನಿರಂತರವಾಗಿ ದುಡಿಯಬೇಕು ಎಂದರ್ಥ, ಈ ರೀತಿಯಾಗಿ ಕಷ್ಟಪಟ್ಟು ಕೆಲಸ ಮಾಡುವವನು ಒಳ್ಳೆಯ ನಿದ್ರೆಯನ್ನು ಪಡೆಯುತ್ತಾನೆ ರಾತ್ರಿಯಲ್ಲಿ. ಹಾಗೆಯೇ ಅಮಿತವಾದ ಕೆಲಸವನ್ನು ಮಾಡಿ ಮಿತವಾಗಿ ನಿದ್ರೆಯನ್ನು ಮಾಡಬೇಕು ಎಂದರ್ಥ. ಬಹಳ ನಿದ್ರೆ ಮಾಡುವುದೂ ಕೂಡ ಆರೋಗ್ಯಕ್ಕೆ ಒಳಿತಲ್ಲ ಎನ್ನುವಂತದ್ದನ್ನು ತಿಳಿಯಬೇಕು. ಮತ್ತು ಶತೃಗಳು ಕೂಡ ಬಂದು ಆಹಾರ ಮೊದಲಾದವುಗಳನ್ನು ಕೇಳಿದರೆ ಅವರಿಗೂ ಕೊಡಬೇಕು ಎಂದರ್ಥ. ಹಾಗೆಯೇ ಇಂದ್ರಿಯಗಳನ್ನು ನಿಗ್ರಹವನ್ನು ಮಾಡಿದಂತಹವನಾಗಿರಬೇಕು. ಹೀಗೆ ಯಾವ ಉತ್ತಮ ಗುಣಗಳನ್ನು ಹೇಳಿದ್ದಾರೋ ಅಂತಹ ಗುಣಗಳಿಂದೊಳಗೂಡಿದಂತಹ ವ್ಯಕ್ತಿಗೆ ಅನರ್ಥಗಳು ಯಾವತ್ತಿಗೂ ಆಗುವುದಿಲ್ಲ ಎಂಬುದಾಗಿ. ಮತ್ತು ಇವೆಲ್ಲವೂ ಉತ್ತಮವಾದಂತಹ ಶಾಸ್ತ್ರಸಮ್ಮತವಾದಂತಹ ಗುಣಗಳು ಆಗಿವೆ. ಇವೆಲ್ಲವೂ ಕೂಡ ಸುಖಮಯವಾದ ಜೀವನಕ್ಕೆ ಮಾರ್ಗಗಳಾಗಿವೆ ಎಂಬುದಾಗಿ ವಿದುರ ಹೇಳುತ್ತಾನೆ.

ಶುದ್ಧ ಹಾಗೂ ಸುಖಮಯ ಜೀವನವನ್ನು ನಡೆಸಲು ಬಯಸುವ ವಿದ್ವಾಂಸ, ತರುಣ, ವೃದ್ಧ, ಬಾಲಕ, ಮಹಿಳೆ, ಶಾಸಕ, ಪ್ರಜೆ, ಧನಿಕ, ದರಿದ್ರ, ವಿದ್ಯಾರ್ಥಿ, ಶಿಕ್ಷಕ, ಸೇವಾವ್ರತೀ ಹೀಗೆ ಪ್ರತಿಯೊಬ್ಬ ಮನುಷ್ಯನಿಗೂ

4 . ಮಹಾಭಾರತ,ಉದ್ಯೋಗಪರ್ವ,ಅಧ್ಯಾಯ–29,–25.

ಉಪಯೋಗವಾಗುವಂತಹ ವಿಷಯಗಳನ್ನು ನಾವು ಇಲ್ಲಿ ಕಾಣಬಹುದಾಗಿದೆ. ಮನುಷ್ಯನು ಅವಶ್ಯವಾಗಿ ಅನುಸರಿಸಬೇಕಾಗಿರುವ ಉತ್ತಮ ಗುಣಗಳನ್ನು ನೋಡಬಹುದಾಗಿದೆ. ಸಮಾಜದ ಅಂಕು ಡೊಂಕುಗಳನ್ನು ತಿದ್ದುವುದಕ್ಕೆ ಬೇಕಾಗಿರುವ ಉತ್ತಮ ಸಂದೇಶಗಳನ್ನು ವಿದುರ ನೀಡಿದ್ದಾನೆ. ಮನುಷ್ಯ ಯಾವ ರೀತಿಯಲ್ಲಿ ಸಮಾಜದಲ್ಲಿ ಇರಬೇಕು ಅವನ ಜೀವನ ನಿರ್ವಹಣೆಯ ಕ್ರಮ ಹೇಗಿರಬೇಕು ಹಾಗೂ ಮನುಷ್ಯರಿಗೆ ಉಪಯೋಗವಾಗುವ ಅನೇಕ ಸಾಮಾಜಿಕ ಸಂದೇಶಗಳನ್ನು ಈ ವಿದುರ ನೀತಿಯಲ್ಲಿ ನಾವು ಕಾಣಬಹುದಾಗಿದೆ. ವಿದುರ ನೀತಿಯಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ಮನಷ್ಯರು ಅಳವಡಿಸಿಕೊಂಡರೆ ಸಮಾಜ ಸ್ವಾಸ್ಥ್ಯದಿಂದ ಕೂಡಿ ಸುಸ್ಥಿರವಾಗಿರುತ್ತದೆ ಎಂಬುದನ್ನು ತಿಳಿಯಬಹುದಾಗಿದೆ.

## ಆಕರಗ್ರಂಥಗಳು


1. ಮಹಾಭಾರತ, ಲೇಖಕರು ವ್ಯಾಸ, ಸಂಪಾದಕರು ಭಕ್ತಿವೇದಾಂತಸ್ವಾಮಿ ಪ್ರಭುಪಾದ, ಪ್ರಕಾಶನ ದಿ ಭಕ್ತಿ ವೇದಾಂತ ಬುಕ್ ಟ್ರಸ್ಟ್, ಬೆಂಗಳೂರು–1995
2. ವಿದುರನೀತಿ, ಲೇಖಕರು ಎನ್. ರಂಗನಾಥ ಶರ್ಮಾ, ಪ್ರಕಾಶನ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು 1990.
3. ಶ್ರೀಮದ್ಭಗವದ್ಗೀತಾ, ಲೇಖಕರು ಮತ್ತು ಸಂಪಾದಕರು ಹೆಚ್. ಪರಮೇಶ್ವರ ಹೆಗಡೆ, ಪ್ರಕಾಶನ ಅನಂತ ಪಬ್ಲಿಕೇಷನ್, ಮೈಸೂರು–2001
4. ಮಹಾಭಾರತದಲ್ಲಿ ಸುಭಾಷಿತಗಳು, ಲೇಖಕರು ಡಾ. ಪಂಚಲಿಂಗಾರಾಧ್ಯ, ಪ್ರಕಾಶನ ಸಾಣೂರು ದೇವರು ಟ್ರಸ್ಟ್, ಮೈಸೂರು–2005
5. ಮಹಾಭಾರತದ ಪ್ರಮುಖ ಪಾತ್ರಗಳು, ಲೇಖಕರು ಪ್ರೊ. ಶಿವಕುಮಾರಸ್ವಾಮಿ, ಪ್ರಕಾಶನ ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–1998
6. ವಿದುರ ನೀತಿ ಸಂಗ್ರಹಃ, ಲೇಖಕರು ಪ್ರೊ ಗೋಪಾಲ ಶಾಸ್ತ್ರೀ, ಪ್ರಕಾಶನ ಚಂದನ ಪಬ್ಲಿಕೇಷನ್, ತಿರುವನಂತಪುರಂ–1989